**ಓ.ಎಸ್. ನಂಃ 472/2022**

**ಪಿ.ಡಬ್ಲ್ಯೂಃ 1**

**ದಿನಾಂಕ 12.03.2026 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಪಾಟೀ ಸವಾಲುಃ ಪ್ರತಿವಾದಿಯ ಪರ ಶ್ರೀ.ಎ.ಟಿ. ರವರಿಂದಃ</u>**

1. ನಾನು ಡಿ.ಕೆ.ಕೊಪ್ಪಲು ಗ್ರಾಮದಲ್ಲಿ ವಾಸವಿದ್ದೇನೆ ಎಂದರೆ ಸರಿ. 1 ನೇ ಪ್ರತಿವಾದಿ ನನ್ನ ತಂದೆ ಎಂದರೆ ಸರಿ. ನನ್ನ ತಂದೆಯಾದ 1 ನೇ ಪ್ರತಿವಾದಿಯು ಸಹ ಡಿ.ಕೆ.ಕೊಪ್ಪಲು ಗ್ರಾಮದಲ್ಲಿ ವಾಸವಿದ್ದಾರೆ ಎಂದರೆ ಸರಿ. ನನ್ನ ತಾಯಿಯಾದ ಪ್ರತಿವಾದಿ ಸಂಖ್ಯೆ –1(ಎ) ರವರು ಸಾಲೆಕೊಪ್ಪಲು ಗ್ರಾಮದಲ್ಲಿ ವಾಸವಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಪ್ರತಿವಾದಿ ಸಂಖ್ಯೆ –1(ಎ) ರವರು ಡಿ.ಕೆ.ಕೊಪ್ಪಲು ಗ್ರಾಮದಲ್ಲಿ ವಾಸವಿದ್ದಾರೆ ಎಂದು ಸ್ವತಃ ನುಡಿದಿರುತ್ತಾರೆ.

2. ಡಿ.ಕೆ.ಕೊಪ್ಪಲು ಗ್ರಾಮದಲ್ಲಿ ನಮಗೆ ಯಾವುದೇ ಸ್ವಂತ ಮನೆ ಇಲ್ಲ. ನಾನು ಡಿ.ಕೆ.ಕೊಪ್ಪಲು ಗ್ರಾಮದಲ್ಲಿ ಬಾಡಿಗೆ ಮನೆಯಲ್ಲಿ ವಾಸವಿದ್ದೇನೆ. ನನ್ನ ಮನೆಯ ಬಾಡಿಗೆ ಕರಾರು ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ. ಡಿ.ಕೆ.ಕೊಪ್ಪಲು ಗ್ರಾಮದಲ್ಲಿ ನಾನು ವಾಸವಿರುವ ಬಾಡಿಗೆ ಮನೆ ಯಾರಿಗೆ ಸೇರಿರುತ್ತದೆ ಎಂದು ನನಗೆ ಗೊತ್ತಿಲ್ಲ. ಎಷ್ಟು ವರ್ಷಗಳಿಂದ ನಾನು ಸದರಿ ಬಾಡಿಗೆ ಮನೆಯಲ್ಲಿದ್ದೇನೆ ಎಂದು ನನಗೆ ಗೊತ್ತಿಲ್ಲ.

3. ದಾವಾ ಆಸ್ತಿಯಲ್ಲಿ ಪಾಲು ಕೇಳಿ ನಾನು ಈ ದಾವೆಯನ್ನು ಹೂಡಿರುತ್ತೇನೆ. ಯಾವ ಕಾರಣದಿಂದ 2 ಮತ್ತು 3 ನೇ ಪ್ರತಿವಾದಿಯರು ಸಾಲೇಕೊಪ್ಪಲು ಗ್ರಾಮದಲ್ಲಿ ವಾಸವಿದ್ದಾರೆ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ನನಗೆ ಅದರ ಬಗ್ಗೆ ಮಾಹಿತಿ ಇಲ್ಲ ಅದನ್ನು ನನ್ನ ತಾಯಿಯ ಬಳಿ ಕೇಳಬೇಕು ಎಂದು ನುಡಿದಿರುತ್ತಾರೆ.

4. ದಾವಾ ಆಸ್ತಿಯಲ್ಲಿ ನಾವು ರಾಗಿ ಬೆಳೆದಿರುತ್ತೇವೆ. ದಾವಾ ಆಸ್ತಿಯ ಬೆಳೆದ ರಾಗಿಯನ್ನು ಪ್ರತಿವಾದಿ ಸಂಖ್ಯೆ-1(ಎ) ರವರು ಮಾರಾಟ ಮಾಡಿ ತಮ್ಮ ಜೀವನ ಸಾಗಿಸುತ್ತಾರೆ. ದಾವಾ ಆಸ್ತಿಯು ನನ್ನ ತಾಯಿಯಾದ ಪ್ರತಿವಾದಿ ಸಂಖ್ಯೆ-2(ಎ) ರವರ ಸಂಪೂರ್ಣ ಸ್ವಾಧೀನದಲ್ಲಿದ್ದು, ಪ್ರತಿವಾದಿ ಸಂಖ್ಯೆ-1(ಎ) ರವರ ಹೇಳಿಕೆಯ ಮೇರೆಗೆ ನಾನು ದಾವಾ ಆಸ್ತಿಯಲ್ಲಿ ಅವರಿಗೆ ರಾಗಿಯನ್ನು ಬೆಳೆದು ಕೊಡುತ್ತೇನೆಯೇ ವಿನಹಃ,

ಅದರಿಂದ ಬಂದ ಆದಾಯವನ್ನು ಪ್ರತಿವಾದಿ ಸಂಖ್ಯೆ-1(ಎ) ರವರೇ ಪಡೆಯುತ್ತಾರೆ. ನಾನು ಮತ್ತು ಪ್ರತಿವಾದಿ ಸಂಖ್ಯೆ-1(ಎ) ರವರು ಒಂದೇ ಮನೆಯಲ್ಲಿ ವಾಸವಿದ್ದೇವೆ ಎಂದರೆ ಸರಿ.

5. ನಮ್ಮ ಗ್ರಾಮದ ಮುಖಂಡರಾದ ರಾಜಣ್ಣ, ಕೃಷ್ಣೇಗೌಡ, ಶ್ರೀನಿವಾಸ, ರಮೇಶ ಮತ್ತು ಇತರರು ಸೇರಿ ದಿನಾಂಕ 25.08.2022 ರಂದು ನ್ಯಾಯ ಪಂಚಾಯಿತಿಕೆ ಮಾಡಿರುತ್ತಾರೆ. ಸದರಿ ನ್ಯಾಯ ಪಂಚಾಯಿತಿಕೆಯಲ್ಲಿ ನಾನು, 1 ನೇ ಪ್ರತಿವಾದಿ ಮತ್ತು ಗ್ರಾಮಸ್ಥರು ಹಾಜರಿದ್ದೇವು.

6. ನನ್ನ ಸಹೋದರನಾದ ಕಿರಣ್ ಕುಮಾರ ರವರು ಮರಣ ಹೊಂದಿ ಅಂದಾಜು 14 ವರ್ಷಗಳಾಗಿರಬಹುದು. ನನ್ನ ಸಹೋದರನ ಮರಣದ ನಂತರ 2 ಮತ್ತು 3 ನೇ ಪ್ರತಿವಾದಿಯರಿಗೆ ಮೋಸ ಮಾಡುವ ಉದ್ದೇಶದಿಂದ ದಿನಾಂಕ 03.07.2019 ರಂದು ನಾನು ದಾವಾ ಆಸ್ತಿಯ ಪೈಕಿ 1 ಎಕರೆ 17 ಗುಂಟೆ ಜಮೀನನ್ನು ನನ್ನ ಹೆಸರಿಗೆ ದಾನ ಪತ್ರ ಬರೆಸಿಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಸದರಿ ದಾನ ಪತ್ರದ ಪ್ರಕಾರ ದಾವಾ ಆಸ್ತಿಯ ಪೈಕಿ 1 ಎಕರೆ 17 ಗುಂಟೆ ಜಮೀನನ್ನು ನನ್ನ ಹೆಸರಿಗೆ ಖಾತೆ ವರ್ಗಾವಣೆ ಕೋರಿ ಸಲ್ಲಿಸಿದ ಅರ್ಜಿಗೆ 2 ನೇ ಪ್ರತಿವಾದಿ ತಕರಾರನ್ನು ಸಲ್ಲಿಸಿದ ಕಾರಣ ತಹಸೀಲ್ದಾರ್ ರವರ ನ್ಯಾಯಾಲಯದಲ್ಲಿ ಆರ್.ಆರ್.ಟಿ ಪ್ರಕರಣ ನಡೆದಿರುತ್ತದೆ ಎಂದರೆ ಸರಿ. 2 ನೇ ಪ್ರತಿವಾದಿ ಸಲ್ಲಿಸಿದ ತಕರಾರನ್ನು ಪುರಸ್ಕರಿಸಿ ಸದರಿ ಆರ್ ಆರ್ ಟಿ ಪ್ರಕರಣವು ವಜಾ ಗೊಂಡಿರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸದರಿ ಪ್ರಕರಣ ವಜಾಗೊಂಡ ಕಾರಣ ನಾನು ಈ ದಾವೆಯನ್ನು ಹೂಡಿರುತ್ತೇನೆ ಎಂದು ಸ್ವತಃ ನುಡಿದಿರುತ್ತಾರೆ. ಸದರಿ ವಿಷಯವನ್ನು ನಾನು ವಾದ ಪತ್ರ ಹೇಳಿ ಬರೆಸಿರುವುದಿಲ್ಲ.

7. ನನ್ನ ಸಹೋದರನಾದ ಕಿರಣ್ ಕುಮಾರ್ ರವರ ಮರಣದ ನಂತರ ನಡೆದ ಮೌಖಿಕ ಪಾಲು ವಿಭಜನೆಯಲ್ಲಿ ದಾವಾ ಆಸ್ತಿಯ ಪೈಕಿ 37 ಗುಂಟೆ ಜಮೀನು ನನ್ನ ಹಿಸ್ಸೆಗೆ ಮತ್ತು 1 ಎಕರೆ ಜಮೀನು 2 ಮತ್ತು 3 ನೇ ಪ್ರತಿವಾದಿಯರ ಹಿಸ್ಸೆಗೆ ಹೋಗಿರುತ್ತದೆ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿಯು ಅಪ್ರಾಪ್ತ ವಯಸ್ಕನಿದ್ದ ಕಾರಣ 2 ಮತ್ತು 3 ನೇ ಪ್ರತಿವಾದಿಯರ ಹಿಸ್ಸೆಗೆ ಹೋಗಿದ್ದ ದಾವಾ ಆಸ್ತಿಯ ಪೈಕಿ 1 ಎಕರೆ ಜಮೀನನ್ನು ನಾನೇ ಉಳುಮೆ ಮಾಡಿ ಅದರಿಂದ ಬಂದ ಆದಾಯವನ್ನು ನಾನು 2 ಮತ್ತು 3 ನೇ ಪ್ರತಿವಾದಿಯರಿಗೆ ಕೊಡುತ್ತಿದ್ದು, ನಂತರದಲ್ಲಿ ಸದರಿ ಜಮೀನಿನಿಂದ

ಬರುವ ಆದಾಯವನ್ನು ನಾನು 2 ಮತ್ತು 3 ನೇ ಪ್ರತಿವಾದಿಯರಿಗೆ ಕೊಡುವುದನ್ನು ನಿಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

8. ದಾವಾ ಆಸ್ತಿಯನ್ನು ಹೊರತುಪಡಿಸಿ ನಮ್ಮ ಕುಟುಂಬಕ್ಕೆ ಸೇರಿದ ಬೇರೆ ಯಾವುದೇ ಆಸ್ತಿಗಳಿಲ್ಲ. ದಾವಾ ಆಸ್ತಿಯನ್ನು ಹೊರತುಪಡಿಸಿ ಡಿ.ಕೆ. ಕೊಪ್ಪಲು ಗ್ರಾಮದಲ್ಲಿ ಪ್ರತಿವಾದಿ ಸಂಖ್ಯೆ-1 ಮತ್ತು ಪ್ರತಿವಾದಿ ಸಂಖ್ಯೆ-1(ಎ) ರವರಿಗೆ ಸೇರಿದ ಮನೆ ಇದ್ದರು ಸಹ ಅದನ್ನು ನಾನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸರಿಯಲ್ಲ. ಈ ಹಿಂದೆ ನಡೆದಿದ್ದ ಮೌಖಿಕ ಪಾಲು ವಿಭಜನೆಯಲ್ಲಿ 2 ಮತ್ತು 3 ನೇ ಪ್ರತಿವಾದಿಯರಿಗೆ ನೀಡಿದ್ದ ದಾವಾ ಆಸ್ತಿಯ ಪೈಕಿ 1 ಎಕರೆ ಜಮೀನನ್ನು ಕಬಳಿಸುವ ಉದ್ದೇಶದಿಂದ ನಾನು ಮತ್ತು 1 ನೇ ಪ್ರತಿವಾದಿ ಶಾಮಿಲಾಗಿ ಈ ಸುಳ್ಳು ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ ಇದೆ.**

**1 ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು, ಕೆ.ಆರ್.ನಗರ.**